ಕರ್ನಾಟಕ ವಿಧಾನಸಭೆ

ಗುರುವಾರ 29ನೇ ಜೂನ್ 2006ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 8 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ : ಶ್ರೀಮತಿ ಜಯಮಾಲರವರಿಗೆ ಸಂಬಂಧಪಟ್ಟಂತೆ.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಸಭಾಧ್ಯಕ್ಷರೆ, ಬಹಳ ಮಹತ್ವದ ವಿಷಯ ಇದೆ, ಇವತ್ತು ಹೆಣ್ಣನ್ನು ಅಸ್ಪೃಶ್ಯರಂತೆ ಕಾಣುತ್ತಿದ್ದಾರೆ. ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲೆ ಜಯಮಾಲ ಎನ್ನುವ ನಟಿ ಹೋಗಿ ಮುಟ್ಟಿದ್ದಕ್ಕೆ.....

ಅಧ್ಯಕ್ಷರು : ಇದನ್ನು ಆಮೇಲೆ ತೆಗೆದುಕೊಳ್ಳೋಣ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ದಯವಿಟ್ಟು ಇದು ಬಹಳ ಮಹತ್ವದ ವಿಚಾರ ಇದೆ.

ಅಧ್ಯಕ್ಷರು : ಅವಕಾಶ ಕೊಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಇದು ಯಾವ ಕಾಲ ಅಧ್ಯಕ್ಷರೆ, ಅಸ್ಪೃಶ್ಯರಂತೆ ನಡೆದುಕೊಳ್ಳುವುದು?

ಅಧ್ಯಕ್ಷರು : ಈಗ ಪಾಟೀಲರೆ, ನಾನು ಅವಕಾಶ ಮಾಡಿ ಕೊಡುತ್ತೇನೆ, ದಯಮಾಡಿ.....

ಶ್ರೀ ಎಸ್.ಎಸ್. ಪಾಟೀಲ್ : ದಯಮಾಡಿ ನನಗೆ ಅವಕಾಶ ಮಾಡಿಕೊಡಬೇಕು ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು : ಮಾಡಿಕೊಡುತ್ತೇನೆ. ಈಗ 69ರ ನಿಯಮದ ಮೇಲೆ ಚರ್ಚೆ. ಶ್ರೀರಾಮರೆಡ್ಡಿಯವರು.

ಶ್ರೀ ಬಿ.ಎ. ಜೀವಿಜಯ : ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಮಹತ್ವದ ವಿಷಯ ಇದೆ.

ಅಧ್ಯಕ್ಷರು : ಜೀವಿಜಯರವರೇ, ನಿಮಗೂ ಅವಕಾಶ ಮಾಡಿಕೊಡುತ್ತೇನೆ. ಆ ವಿಷಯ ಅತೀ ಮಹತ್ವದ್ದು ಇದೆ. ಅವಕಾಶ ಮಾಡಿಕೊಡುತ್ತೇನೆ.

2. ನಿಯಮ 69ರ ಮೇರೆಗೆ

ವಿಷಯ : ಬಿ.ಎಂ.ಐ.ಸಿ. ಯೋಜನೆಯ ವಿಚಾರದ ಬಗ್ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಿಯಮ 69ರ ಕೆಳಗಡೆ ಬಿ.ಎಂ.ಐ.ಸಿ. ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ನಿಮಗೆ ಧನ್ಯವಾದಗಳು. ಈ ಚರ್ಚೆ ಪ್ರಾರಂಭವಾಗುವುದಕ್ಕೆ ಮೊದಲು ನನ್ನದು ಸದನಕ್ಕೆ ಒಂದು ವಿನಂತಿ ಇದೆ. ನನ್ನ ವಿನಂತಿ ಏನೆಂದರೆ,